ದಿನಾಂಕ 15-07-2023 ರಂದು ಎಂ.ಡಬ್ಲ್ಯು-1 ರವರನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಪಾಟೀಸವಾಲುಃ 1 ನೇ ಪಕ್ಷಗಾರನ ಪರ ಶ್ರೀ ಕೆ.ಬಿ.ಎ ವಕೀಲರಿಂದ</u>**

1) ನಾನು ಸಾಮಾನ್ಯವಾಗಿ ಕೇವಲ ಕಾರ್ಮಿಕ ನ್ಯಾಯಾಲಯದ ಪ್ರಕರಣಗಳನ್ನು ನಡೆಸುತ್ತೇನೆ ಎನ್ನುವುದು ಸರಿಯಲ್ಲ. ನಾನು ಎಲ್ಲಾ ರೀತಿಯ ಪ್ರಕರಣಗಳನ್ನು ನಡೆಸುತ್ತೇನೆ. ಯಾವುದೇ ಒಂದು ಕಾರ್ಖಾನೆಗೆ ಸೇವಾ ನಿಯಮಗಳಿಗೆ ಸಂಬಂಧಪಟ್ಟಂತೆ ಸ್ಥಾಯಿ ಆದೇಶಗಳು ಇರುತ್ತವೆ. ಅದೇ ಸಂಸ್ಥೆಗಳಿಗೆ ಸೇವಾ ನಿಯಮಗಳು ಇರುತ್ತವೆ. ಪ್ರತಿವಾದಿ ಸಂಸ್ಥೆ ಒಂದು ಕಾರ್ಖಾನೆ ಆಗಿರುತ್ತದೆ. ಪ್ರತಿವಾದಿ ಸಂಸ್ಥೆಯು ತಮ್ಮ ಸಂಸ್ಥೆಯ ಸ್ಥಾಯಿ ಆದೇಶದ ದೃಢೀಕೃತ ನಕಲನ್ನು ನನ್ನ ಮುಂದೆ ಹಾಜರುಮಾಡಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ಸ್ಥಾಯಿ ಆದೇಶದ ನಕಲನ್ನು ನನ್ನ ಮುಂದೆ ಹಾಜರುಪಡಿಸಿದ್ದು ಆಂತರಿಕ ವಿಚಾರಣೆಯಲ್ಲಿ ನಿಶಾನೆ ಎಂದು ಗುರುತಿಸಿರುವುದಿಲ್ಲ. ಸದರಿ ಸ್ಥಾಯಿ ಆದೇಶವನ್ನು ನನ್ನ ಮುಂದೆ ಹಾಜರುಪಡಿಸದ ಕಾರಣ ನಿಶಾನೆ ಎಂದು ಗುರುತಿಸಿಲ್ಲ ಎನ್ನುವುದು ಸರಿಯಲ್ಲ. ಅಪಾದನಾ ಪಟ್ಟಿಯನ್ನು ಕಾರ್ಖಾನೆಯವರು ಸ್ಥಾಯಿ ನಿಯಮಗಳಿಗೆ ಅನುಗುಣವಾಗಿ ನೀಡಿದ ಬಗ್ಗೆ ಅಪಾದನಾ ಪಟ್ಟಿಯಲ್ಲಿ ಉಲ್ಲೇಖ ಮಾಡಿರುವುದಿಲ್ಲ.

2) ಸಾಮಾನ್ಯವಾಗಿ ಯಾವುದೇ ಕಾರ್ಮಿಕ ಅಶಿಸ್ತಿನಿಂದ ನಡೆದುಕೊಂಡಲ್ಲಿ ಆತನಿಗೆ ಮೇಮೋ ಕೊಟ್ಟು ಸಮಜಾಯಿಷಿ ಕೇಳುತ್ತಾರೆ. ಸಮಜಾಯಿಷಿ ನೀಡಿದ ನಂತರ ಕಾರ್ಮಿಕನಿಗೆ ಅಪಾದನಾ ಪಟ್ಟಿಯನ್ನು ನೀಡಿ ನಂತರ ಆಂತರಿಕ ತನಿಖೆ ಮಾಡಬಹುದಾಗಿದೆ, ಆದರೆ ಕೆಲವು ಬಾರಿ ಮೇಮೋ ಮೇಲೆ ಆಂತರಿಕ ತನಿಖೆಯನ್ನು ಮಾಡಬಹುದಾಗಿದೆ. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ಅಪಾದನಾ ಪಟ್ಟಿ ಮತ್ತು ಆಂತರಿಕ ತನಿಖಾ ನೋಟಿಸನ್ನು ಒಂದೇ ಬಾರಿ ನೀಡಿರುತ್ತದೆ. ನಿಶಾನೆ ಎಂ.1 ರಲ್ಲಿ ಅರ್ಜಿದಾರನಿಗೆ ಕೊಟ್ಟ ಅಪಾದನಾ ಪಟ್ಟಿ ಮತ್ತು ನೋಟಿಸಿನ ಪ್ರತಿ ಇರುತ್ತದೆ. ಸದರಿ ಅಪಾದನಾ ಪಟ್ಟಿಗೆ ಅರ್ಜಿದಾರ ಉತ್ತರ ಕೊಟ್ಟ ಬಗ್ಗೆ ನಿಶಾನೆ ಎಂಒ -1 ರಲ್ಲಿ ಕಂಡುಬರುವುದಿಲ್ಲ. ಸದರಿ ಕಾರಣ ಕೇಳುವ ನೋಟಿಸು ನ್ಯಾಯದ ನೈಸರ್ಗಿಕ ನಿಯಮಕ್ಕೆ ವಿರುದ್ಧವಾಗಿದೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆ ಅರ್ಜಿದಾರನಿಗೆ ಸಮಜಾಯಿಷಿ ನೀಡಲು ಸಾಕಷ್ಟು ಕಾಲಾವಕಾಶ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಅಪಾದನಾ ಪಟ್ಟಿಯೊಡನೆ ಅರ್ಜಿದಾರನಿಗೆ ದಾಖಲೆಗಳ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ ಎನ್ನುವುದು ಸರಿ ಇದೆ. ಆಂತರಿಕ ತನಿಖಾ ಸಮಯದಲ್ಲಿ ಅರ್ಜಿದಾರನಿಗೆ ದಾಖಲೆಗಳ ವಿವರ ಮತ್ತು ಸಾಕ್ಷಿದಾರರ ವಿವರಗಳನ್ನು ಪೂರೈಸಿಲ್ಲ ಎನ್ನುವುದು ಸರಿಯಲ್ಲ.

3) ಇಂದು ನ್ಯಾಯಾಲಯದ ಮುಂದೆ ಇರುವ ಅರ್ಜಿದಾರರನ್ನು ಆಂತರಿಕ ವಿಚಾರಣಾ ಸಮಯದಲ್ಲಿ ನೋಡಿರಬಹುದಾಗಿದೆ. ಅರ್ಜಿದಾರನು ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದನು

ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅರ್ಜಿದಾರನಿಗೆ ಸರಿಯಾಗಿ ಪಾಟೀಸವಾಲು ಮಾಡಲು ಬಿಟ್ಟಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರನು ಕೇಳಿದ ಪಾಟೀಸವಾಲಿನ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ನಾನು ಪೂರ್ಣವಾಗಿ ದಾಖಲಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನು ಕೊಟ್ಟ ಹೇಳಿಕೆಯನ್ನು ಸಹ ಸರಿಯಾಗಿ ದಾಖಲಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ ಪ್ರಸೆಂಟಿಂಗ್ ಆಫೀಸರ್ ಹಾಜರಿದ್ದರೂ ಸಹ ಅರ್ಜಿದಾರನ ಪಾಟೀಸವಾಲನ್ನು ನಾನೇ ಕೇಳಿ ದಾಖಲಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಆಂತರಿಕ ವಿಚಾರಣೆಯ ಪ್ರತಿದಿನದ ನಡಾವಳಿಯ ಒಂದು ನಕಲನ್ನು ಅದೇ ದಿನ ಅರ್ಜಿದಾರನಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನಿಗೆ ಸರಿಯಾಗಿ ಅವಕಾಶ ಕೊಡದೇ ನನ್ನ ಮನಸ್ಸಿಗೆ ತೋಚಿದಂತೆ ಆಂತರಿಕ ವಿಚಾರಣೆ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಎದುರುದಾರ ಸಂಸ್ಥೆಯ ಆಡಳಿತ ಮಂಡಳಿಗೆ ಅನುಕೂಲವಾಗುವಂತೆ ಅರ್ಜಿದಾರ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ಮೇಲೆ ಸುಳ್ಳು ವಿಚಾರಣಾ ವರದಿಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯ ಸಾಕ್ಷಿದಾರರ ಮುಖ್ಯವಿಚಾರಣೆ ಆದ ನಂತರ ಅವರಿಗೆ ಪಾಟೀಸವಾಲು ಮಾಡಬಹುದು ಎಂದು ನಾನು ಅರ್ಜಿದಾರನಿಗೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯವರ ಸಾಕ್ಷಿ ವಿಚಾರಣೆ ಆದ ನಂತರ ಅರ್ಜಿದಾರನಿಗೆ ತನ್ನ ಸಾಕ್ಷಿ ವಿಚಾರಣೆ ಮಾಡಬಹುದು ಎಂದು ಮತ್ತು ಆತನು ಹೇಳಿಕೆ ಕೊಡಬಹುದು ಎಂದು ನಾನು ಹೇಳಿಲ್ಲ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯವರು ಅರ್ಜಿದಾರನಿಗೆ ಪಾಟೀಸವಾಲು ಮಾಡಬಹುದು ಎಂದು ನಾನು ಅರ್ಜಿದಾರನಿಗೆ ತಿಳಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರನಿಗೆ ಮತ್ತು ಎದುರುದಾರಿಗೆ ಅವರ ಸಾಕ್ಷಿ ಹೇಳಿಕೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಲು ಹೇಳಿಲ್ಲ ಎನ್ನುವುದು ಈಗ ನನಗೆ ನೆನಪಿರುವುದಿಲ್ಲ. ನಾನು ಅರ್ಜಿದಾರನಿಗೆ ಸಾಕ್ಷಿದಾರರ ಪಾಟೀಸವಾಲನ್ನು ಯಾವಾಗ ಮಾಡಬೇಕೆಂದು ಮತ್ತು ಆತನ ಪರವಾಗಿ ದಾಖಲೆಗಳನ್ನು ಹಾಜರುಪಡಿಸಿ ಸಾಕ್ಷಿದಾರರ ವಿಚಾರಣೆ ಮಾಡಬಹುದು ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ. ನಾನು ಆಂತರಿಕ ತನಿಖೆಯನ್ನು ಯಾವ ರೀತಿ ಮಾಡಲಾಗುತ್ತದೆ ಎಂದು ಅರ್ಜಿದಾರರಿಗೆ ತಿಳಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿದಾರರಿಗೆ ಅಪಾದನಾ ಪಟ್ಟಿ ಪೂರೈಕೆಯಾಗಿದೆಯೋ ಇಲ್ಲವೋ ಎಂದು ಕೇಳಿಲ್ಲ ಎನ್ನುವುದು ಸರಿಯಲ್ಲ. ಅಪಾದನಾ ಪಟ್ಟಿಗೆ ಅರ್ಜಿದಾರರು ತಮ್ಮ ಉತ್ತರ ಕೊಟ್ಟಿದ್ದಾರೋ ಇಲ್ಲವೋ ಎಂದು ನಾನು ವಿಚಾರಣೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಅಪಾದನಾ ಪಟ್ಟಿಗೆ ಉತ್ತರ ಕೊಡದೇ ಸಂದರ್ಭದಲ್ಲಿ ನನ್ನ ಮುಂದೆ ಅದಕ್ಕೆ ಉತ್ತರ ಸಲ್ಲಿಸಬಹುದು ಎಂದು ನಾನು ಅರ್ಜಿದಾರರಿಗೆ ಹೇಳಿಲ್ಲ ಎನ್ನುವುದು ಸರಿಯಲ್ಲ.

4) ದಿನಾಂಕ 01-02-2020 ರ ಅಪಾದನಾ ಪಟ್ಟಿಯು ಅರ್ಜಿದಾರರಿಗೆ ದಿನಾಂಕ 04-02-2020 ರಂದು ಪೂರೈಕೆಯಾಗಿದೆ ಎಂದು ಅಂಚೆ ಸ್ವೀಕೃತಿ ಪತ್ರದಿಂದ ಕಂಡುಬರುತ್ತದೆ.

ನಾನು ದಿನಾಂಕ 13-02-2020 ರಂದು ನನ್ನ ಆಂತರಿಕ ತನಿಖೆಯನ್ನು ಆರಂಭಿಸಿರುತ್ತೇನೆ. ಆಂತರಿಕ ತನಿಖಾ ವರದಿಯಲ್ಲಿರುವ ನಿಶಾನೆ ಎಂ -12 ಇದು ದಿನಾಂಕ 27-12-2019 ರಂದು ನೊಂದ ಕಾರ್ಮಿಕರು ಆಗಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಇವರಿಗೆ ಬರೆದದ್ದು ಇರುತ್ತದೆ. ಆಂತರಿಕ ತನಿಖಾ ವರದಿಯಲ್ಲಿನ ನಿಶಾನೆ ಎಂ-13 ಎದುರುದಾರರ ಕಾರ್ಮಿಕರು ತಮ್ಮ ಕಾರ್ಮಿಕ ಸಂಘಟನೆಯ ಅಧ್ಯಕ್ಷರಿಗೆ ಬರೆದ ಪತ್ರ ಆಗಿರುತ್ತದೆ. ದಿನಾಂಕ 28-12-2019 ರ ಅಂಚೆ ಲಕೋಟೆಯನ್ನು ಕಾರ್ಮಿಕರು ಎದುರುದಾರ ಸಂಸ್ಥೆಯ ಮಾನವ ಸಂಪನ್ಮೂಲ ಅಧಿಕಾರಿಗೆ ಕಳುಹಿಸಿಲ್ಲ ಎನ್ನುವುದು ಸರಿಯಲ್ಲ.

5) ದಿನಾಂಕ 10-08-2020 ರಂದು ಮಂಡನಾಧಿಕಾರಿಯು ಕಾರ್ಮಿಕ ಬಲರಾಮ್ ಈತನ ವಿಚಾರಣೆ ಮಾಡಿಸಿರುತ್ತಾರೆ. ದಿನಾಂಕ 20-08-2020 ರಂದು ಬಲರಾಮ ಈತನ ಮುಂದುವರಿದ ಪಾಟೀಸವಾಲು ಕೊನೆಗೊಂಡಿರುತ್ತದೆ. ದಿನಾಂಕ 05-09-2020 ರಂದು ಸ್ಟೀಪನ್ ರಾಡ್ರಿಗಸ್ , ದೇವೇಂದ್ರ, ಮಧುಕರ , ಶ್ರೀ ರಾಮ ಇವರನ್ನು ಪಾಟೀಸವಾಲು ದಾಖಲಿಸಿರುತ್ತದೆ. ದಿನಾಂಕ 16-09-2020 ರಂದು ದಿನೇಶ ಅಮೀನ್ , ಮಹೇಶ ಇವರ ಪಾಟೀಸವಾಲು ದಾಖಲಾಗಿರುತ್ತದೆ. ದಿನಾಂಕ 20-08-2020 ರಂದು ನಾನು ಮೂರು ಜನ ಸಾಕ್ಷಿದಾರರ ಪಾಟೀಸವಾಲನ್ನು ದಾಖಲಿಸಿಕೊಂಡಿದ್ದೇನೆ ಎನ್ನುವುದು ಸರಿ ಇದೆ. ದಿನಾಂಕ 13-02-2020 ರಂದು ಆಂತರಿಕ ತನಿಖೆಯನ್ನು ಆರಂಭಿಸಿರುತ್ತೇನೆ. ದಿನಾಂಕ 10-06-2020 ರಿಂದ 26-09-2020 ರವರೆಗೆ ಆಂತರಿಕ ತನಿಖೆಯನ್ನು ನಿರಂತರವಾಗಿ ನಡೆಸಿ ಸಾಕ್ಷಿದಾರರ ವಿಚಾರಣೆ ಮತ್ತು ಪಾಟೀಸವಾಲನ್ನು ದಾಖಲಿಸಿಕೊಂಡಿರುತ್ತೇನೆ. ನಾನು 9 ಜನ ಅರ್ಜಿದಾರರಿಗೆ ಪಾಟೀಸವಾಲು ಮಾಡಲು ಕಾಲಾವಕಾಶವನ್ನು ನೀಡದೇ ತರಾತುರಿಯಲ್ಲಿ ಒಂದೇ ದಿನ ಬಹಳಷ್ಟು ಸಾಕ್ಷಿದಾರರ ಪಾಟೀಸವಾಲು ದಾಖಲಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

6) ಆಡಳಿತ ಮಂಡಳಿಯವರು 1 ನೇ ಸಾಕ್ಷಿದಾರ ಸಂತೋಷ ಸಾಲ್ಯಾನ್ ಈತನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಆಂತರಿಕ ತನಿಖೆಯಲ್ಲಿ ಸಲ್ಲಿಸಿರುತ್ತಾರೆ. ಮುಖ್ಯವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ಮಂಡನಾಧಿಕಾರಿಯು ನನ್ನಿಂದ ಪೂರ್ವ ಅನುಮತಿಯನ್ನು ಪಡೆದಿರುವುದಿಲ್ಲ. ನಾನು ಯಾವುದೇ ಅರ್ಜಿದಾರರಿಗೂ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ಸ್ವೀಕರಿಸಲು ತಕರಾರು ಇದೆಯೋ ಹೇಗೆ ಎಂದು ಕೇಳಿರುವುದಿಲ್ಲ. ಆಡಳಿತ ಮಂಡಳಿಗೆ ಆಂತರಿಕ ತನಿಖೆಯಲ್ಲಿ ಕೊಟ್ಟಷ್ಟು ಅವಕಾಶವನ್ನು ನಾನು ಅರ್ಜಿದಾರರಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಸಂತೋಷ ಸಾಲ್ಯಾನ್ ಎದುರುದಾರ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕನಿರುತ್ತಾನೆ. ಸದರಿ ಸಂತೋಷ ಸಾಲ್ಯಾನ್ ಗೆ 9 ಜನ ಅರ್ಜಿದಾರರ ಬಗ್ಗೆ ಮೌಖಿಕವಾಗಿ ಸಾಕ್ಷಿ ಹೇಳಲು ಸಾಧ್ಯ ಇರದ ಕಾರಣ ನಾನೇ ಆತನಿಗೆ ಹೇಳಿ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು

ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ.

7) ಕರಿಯ ಎನ್ನುವ ಸೂಪರ್ವೈಸರ್ ಅನ್ನು ಆಡಳಿತ ಮಂಡಳಿಯವರು ಆಂತರಿಕ ವಿಚಾರಣಾ ಸಮಯದಲ್ಲಿ ನನ್ನ ಮುಂದೆ ವಿಚಾರಣೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಆಡಳಿತ ಮಂಡಳಿಯವರು ನನಗೆ ಅರ್ಜಿದಾರನಿಗೆ ಕೊಟ್ಟ ಅಪಾದನಾ ಪಟ್ಟಿಯಲ್ಲಿನ ಆರೋಪಗಳನ್ನು ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಪೂರೈಸಲು ನನಗೆ ಕೇಳಿರುತ್ತಾರೆ. ಆಂತರಿಕ ವಿಚಾರಣಾ ವ್ಯಾಪ್ತಿಯನ್ನು ಬದಲಾಯಿಸುವ ಅಥವಾ ಹೆಚ್ಚಿಸುವ ಅಧಿಕಾರ ನನಗೆ ಇರುವುದಿಲ್ಲ, ಆದರೆ ಆಡಳಿತ ಮಂಡಳಿಯು ಹೆಚ್ಚಿನ ದೋಷರೋಪಣಾ ಪೂರೈಸಿದಲ್ಲಿ ಆ ಬಗ್ಗೆ ಆಂತರಿಕ ವಿಚಾರಣೆ ಮಾಡುವ ಅಧಿಕಾರ ನನಗೆ ಇರುತ್ತದೆ. ಈ ಪ್ರಕರಣದಲ್ಲಿ ಆಂತರಿಕ ವಿಚಾರಣೆ ಆದ ನಂತರ ಆಡಳಿತ ಮಂಡಳಿ ಹೆಚ್ಚುವರಿ ಆರೋಪಣಾ ಪಟ್ಟಿಯನ್ನು ಪೂರೈಸಿರುವುದಿಲ್ಲ. ನಾನು ಆಡಳಿತ ಮಂಡಳಿಗೆ ಖುಷಿ ಪಡಿಸಲೆಂದು ಅರ್ಜಿದಾರ ಹಾಜರುಪಡಿಸಿದ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೆ ಏಕಪಕ್ಷೀಯವಾದ ವಿಚಾರಣಾ ವರದಿಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಆಂತರಿಕ ತನಿಖೆಯನ್ನು ಆರಂಭ ಮಾಡುವ ಮೊದಲು ಅರ್ಜಿದಾರ ಮತ್ತು ಎದುರುದಾರ ಸಂಸ್ಥೆಗೆ ಅಂದರೆ ಮಂಡನಾಧಿಕಾರಿಗೆ ತನಿಖೆಯ ರೀತಿ ನಿಯಮಗಳನ್ನು ವಿವರಿಸಿರುತ್ತೇನೆ. ನಾನು ಅರ್ಜಿದಾರನಿಗೆ ಯಾವಾಗ ಆತನ ದಾಖಲೆಗಳನ್ನು ಮತ್ತು ಹೇಳಿಕೆಗಳನ್ನು ಹಾಜರುಪಡಿಸಬೇಕೆಂದು ವಿವರಿಸಿಲ್ಲ ಎನ್ನುವುದು ಸರಿಯಲ್ಲ.

8) ಎದುರುದಾರ ಸಂಸ್ಥೆ ನನಗೆ ಆಂತರಿಕ ವಿಚಾರಣೆಯ ತನಿಖಾಧಿಕಾರಿ ಎಂದು ನೇಮಕ ಮಾಡಿದ ಬಗ್ಗೆ ಪ್ರತ್ಯೇಕವಾಗಿ ಆದೇಶ ನೀಡಿರುವುದಿಲ್ಲ, ಸಾಕ್ಷಿ ಸ್ವತಃ ಹೇಳುವುದೇನೆಂದರೆ ಆಂತರಿಕ ತನಿಖಾ ನೋಟಿಸಿನಲ್ಲಿ ಆ ಬಗ್ಗೆ ಉಲ್ಲೇಖ ಇರುತ್ತದೆ. ನಾನು ಎದುರುದಾರ ಸಂಸ್ಥೆಗೆ ಆಂತರಿಕ ತನಿಖೆ ಮಾಡಲು ಒಪ್ಪಿಕೊಂಡಿದ್ದೇನೆಂದು ಒಂದು ಪತ್ರವನ್ನು ನೀಡಿರಬಹುದಾಗಿದೆ. ನನಗೆ ಈ ಪ್ರಕರಣದ ಆಂತರಿಕ ವಿಚಾರಣೆಯನ್ನು ಮಾಡಲು ಯಾವುದೇ ನೇಮಕಾತಿ ಆದೇಶವನ್ನು ಕೊಟ್ಟಿಲ್ಲ ಹಾಗೂ ನಾನು ಎದುರುದಾರ ಸಂಸ್ಥೆ ಗೆ ನನ್ನ ಒಪ್ಪಿಗೆ ಪತ್ರವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು ,
ಉಡುಪಿ